**All India Radio: Bangalore**
**National Bulletin In Kannada**
**09.06.2025 / 1.10 pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**09.06.2025 / 1.10 pm**

**<><*<><>*><>**

<u>ಮುಖ್ಯಾಂಶಗಳು</u>

೧. ೧೪೦ ಕೋಟಿ ಭಾರತೀಯರ ಸಾಮೂಹಿಕ ಭಾಗವಹಿಸುವಿಕೆಯಿಂದ ದೇಶದಲ್ಲಿ ತ್ವರಿತ ಪ್ರಗತಿ - ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

೨. ಆಯುಷ್ಮಾನ್ ಭಾರತ್ ಜನ ಆರೋಗ್ಯ ಯೋಜನೆಯಿಂದ ಆರೋಗ್ಯ ವಲಯದಲ್ಲಿ ಐತಿಹಾಸಿಕ ಬೆಳವಣಿಗೆ ; ಕೇಂದ್ರ ಸರ್ಕಾರದಿಂದ ೪೧ ಕೋಟಿಗೂ ಅಧಿಕ ಆಯುಷ್ಮಾನ್ ಕಾರ್ಡ್ ಸೃಜನೆ

೩. ಇದೇ ೧೧ರೊಳಗೆ ತಮ್ಮ ಹೇಳಿಕೆ ದಾಖಲಿಸುವಂತೆ ಆರ್‌ಸಿಬಿ ಕಾಲ್ತುಳಿತ ಘಟನೆಯ ೪೫ ಗಾಯಾಳುಗಳಿಗೆ ನಿರ್ದೇಶನ

೪. ಯುಇಎಫ್‌ಎ ನೇಷನ್ಸ್ ಲೀಗ್ ಫುಟ್ಬಾಲ್ ಟೂರ್ನಿ ; ಫೈನಲ್ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಪೋರ್ಚುಗಲ್ ತಂಡಕ್ಕೆ ಐತಿಹಾಸಿಕ ಜಯ

*******************

೧೪೦ ಕೋಟಿ ಭಾರತೀಯರ ಆಶೀರ್ವಾದ ಮತ್ತು ಸಾಮೂಹಿಕ ಭಾಗವಹಿಸುವಿಕೆಯಿಂದ ಕಳೆದ ೧೧ ವರ್ಷಗಳಲ್ಲಿ ವಿವಿಧ ವಲಯಗಳಾದ್ಯಂತ ದೇಶ ತ್ವರಿತ ಪರಿವರ್ತನೆಗೆ ಸಾಕ್ಷಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಅವರು, 'ಸಬ್ ಕಾ ಸಾತ್ ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ, ಹಾಗೂ ಸಬ್ ಕಾ ಪ್ರಯಾಸ್' ದೃಷ್ಟಿಕೋನದ ಮೂಲಕ ಎನ್‌ಡಿಎ ಸರ್ಕಾರ ಅಸಾಧಾರಣ ಗತಿ, ವ್ಯಾಪ್ತಿ ಮತ್ತು ಸೂಕ್ಷ್ಮತೆಯ ಮೂಲಕ ಬದಲಾವಣೆಗಳನ್ನು ತಂದಿದೆ. ಆರ್ಥಿಕ ಬೆಳವಣಿಗೆಯಿಂದ ಸಾಮಾಜಿಕ ಏಳಿಗೆವರೆಗೆ ಜನಕೇಂದ್ರಿತ,

ಒಳಗೊಳ್ಳುವ ಮತ್ತು ಸರ್ವತೋಮುಖ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಲಾಗಿದೆ. ಇಂದು ಭಾರತ ಕೇವಲ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಷ್ಟೇ ಅಲ್ಲದೇ ಹವಾಮಾನ ಬದಲಾವಣೆ ಮತ್ತು ಡಿಜಿಟಲ್ ನಾವೀನ್ಯತೆಯಂತಹ ವಿಷಯಗಳ ಕುರಿತ ಪ್ರಮುಖ ಜಾಗತಿಕ ಧ್ವನಿಯಾಗಿ ಬೆಳೆದಿದೆ. ಈ ಅಡಿಪಾಯದೊಂದಿಗೆ ಭಾರತ ಅಭಿವೃದ್ಧಿ ಹೊಂದುವ ರಾಷ್ಟ್ರವಾಗುವತ್ತ ಭರವಸೆ, ವಿಶ್ವಾಸ ಮತ್ತು ದೃಢ ನಿಶ್ಚಯದೊಂದಿಗೆ ಎದುರು ನೋಡುತ್ತಿದೆ ಎಂದು ಪ್ರಧಾನಿ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಇದೇ ವೇಳೆ ಪ್ರಧಾನಿ ಭಾರತದ ಅಭಿವೃದ್ಧಿ ಪಯಣದ ಕುರಿತು ನಮೋ ಆಪ್‌ನಲ್ಲಿರುವ ವಿಡಿಯೋ, ಇನ್ಫೋಗ್ರಾಫಿಕ್ಸ್ ಮತ್ತು ಲೇಖನಗಳ ಮೂಲಕ ತಿಳಿದುಕೊಳ್ಳಲು ಜನರಿಗೆ ಆಹ್ವಾನಿಸಿದ್ದಾರೆ. ಎನ್‌ಡಿಎ ಆಡಳಿತಕ್ಕೆ ೧೧ ವರ್ಷ ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮೈಜಿಒವಿ ವೇದಿಕೆಯಲ್ಲಿ ಹಲವು ಸ್ಪರ್ಧೆಗಳ ಸರಣಿಯನ್ನು ಆಯೋಜಿಸಿದೆ. ಇದರಲ್ಲಿ ಬರವಣಿಗೆ ಸ್ಪರ್ಧೆ, ಮಿನಿ ಲಾಗ್ ಸ್ಪರ್ಧೆ, ಫೋಟೊ ಸ್ಪರ್ಧೆ ಸೇರಿದಂತೆ ಇನ್ನಿತರ ವಿಶಿಷ್ಟ ಸ್ಪರ್ಧೆಗಳಲ್ಲಿ ನಾಗರಿಕರು ಪಾಲ್ಗೊಳ್ಳಬಹುದಾಗಿದೆ. ಇದೇ ೨೦ ಸ್ಪರ್ಧೆಗಳಿಗೆ ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ.

*******************

ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಜನ ಆರೋಗ್ಯ ಯೋಜನೆ ಕಳೆದ ೧೧ ವರ್ಷಗಳಲ್ಲಿ ಆರೋಗ್ಯ ವಲಯದಲ್ಲಿ ಐತಿಹಾಸಿಕ ಬೆಳವಣಿಗೆಗಳಿಗೆ ಕಾರಣವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿಂದು ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಳೆದ ಒಂದು ದಶಕದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದೇಶ ಕಂಡಿರುವ ಪ್ರಗತಿಯ ಕುರಿತು ಪ್ರಸ್ತಾಪಿಸಿದ್ದಾರೆ. ಕಳೆದ ೧೧ ವರ್ಷಗಳು ಶಿಕ್ಷಣ, ಆರೋಗ್ಯ, ಸಂಚಾರ, ಮೂಲಸೌಕರ್ಯ, ರಕ್ಷಣೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಅಭೂತಪೂರ್ವ ಪ್ರಗತಿಗೆ ಸಾಕ್ಷಿಯಾಗಿವೆ ಎಂದಿರುವ ಅವರು ಆಯುಷ್ಮಾನ್ ಭಾರತ ಜನ ಆರೋಗ್ಯದಂತಹ ಯೋಜನೆಗಳು ಸಮಾಜದ ಎಲ್ಲ ವರ್ಗಗಳ ಜನರ ಏಳಿಗೆಗೆ ಪೂರಕವಾಗಿವೆ.  ಮೇ ೩೦ರ ವೇಳೆಗೆ ೩೩ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ೪೧ ಕೋಟಿಗೂ ಅಧಿಕ ಆಯುಷ್ಮಾನ್ ಕಾರ್ಡ್‌ಗಳನ್ನು ಸೃಜಿಸಲಾಗಿದೆ. ಈ ಯೋಜನೆ ಜಗತ್ತಿನ ಅತಿದೊಡ್ಡ ಸಾರ್ವಜನಿಕ ಅನುಧಾನಿತ ಆರೋಗ್ಯ ವಿಮಾ

ಯೋಜನೆಯಾಗಿ ಹೊರ ಹೊಮ್ಮಿದೆ. ಇದರ ಜೊತೆಗೆ ೨೦೧೪ರಲ್ಲಿ ಕೇವಲ ೮೦ ಇದ್ದ ಜನೌಷಧಿ ಕೇಂದ್ರಗಳು ಕಳೆದ ಮೇ ೩೦ರ ವೇಳೆಗೆ ೧೬ ಸಾವಿರದ ೪೬೯ಕ್ಕೆ ಏರಿಕೆ ಕಂಡಿವೆ ಎಂದು ಹೇಳಿದರು.

ಧ್ವನಿ : ಜೆ.ಪಿ. ನಡ್ಡಾ (೧೯ ಸೆಕೆಂಡ್‌ಗಳು)

******************

ಇದೇ ೪ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಭೀಕರ ಕಾಲ್ತುಳಿತ ಘಟನೆಯಲ್ಲಿ ೧೧ ಜನ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗಾಯಗೊಂಡ ೪೫ ಜನರಿಗೆ ಬೆಂಗಳೂರು ನಗರ ಉಪ ಆಯುಕ್ತ ಜಿ. ಜಗದೀಶ್ ನೋಟಿಸ್ ಜಾರಿ ಮಾಡಿದ್ದಾರೆ. ನೋಟಿಸ್ ಜಾರಿಗೊಳಿಸಲಾದ ೪೫ ಮಂದಿಗೆ ಇದೇ ೧೧ರೊಳಗೆ ತಮ್ಮ ಹೇಳಿಕೆಗಳನ್ನು ದಾಖಲಿಸುವಂತೆ ನಿರ್ದೇಶಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೆಜಿಸ್ಟ್ರಿಯಲ್ ತನಿಖೆ ನಡೆಸಲು ಸೂಚಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ೧೫ ದಿನಗಳೊಳಗಾಗಿ ವರದಿ ಸಲ್ಲಿಸುವಂತೆ ಉಪ ಆಯುಕ್ತ ಜಿ. ಜಗದೀಶ್ ಅವರಿಗೆ ನಿರ್ದೇಶಿಸಿದ್ದಾರೆ. ಗಾಯಾಳುಗಳು ಹೇಳಿಕೆಗಳು ದಾಖಲಾಗುತ್ತಿದ್ದಂತೆ ಉಪ ಆಯುಕ್ತರು ಮೃತಪಟ್ಟವರ ಕುಟುಂಬಸ್ಥರ ಹಾಗೂ ಪ್ರತ್ಯಕ್ಷ ದರ್ಶಿಗಳ ಹೇಳಿಕೆಗಳನ್ನು ಇದೇ ೧೩ರಂದು ದಾಖಲಿಸಿಕೊಳ್ಳಲಿದ್ದಾರೆ. ಘಟನೆ ನಡೆದ ದಿನದಂದು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಿಯೋಜಿಸಲಾಗಿದ್ದ ಪೊಲೀಸ್ ಸಿಬ್ಬಂದಿ ಕುರಿತಂತೆ ಮಾಹಿತಿ ನೀಡಲು ಕೋರಿ ಬೆಂಗಳೂರು ಪೊಲೀಸ್ ಆಯುಕ್ತರ ಕಚೇರಿಗೆ ಪತ್ರ ಬರೆಯಲಾಗಿದೆ.

******************

ಕಳೆದ ಒಂದು ದಶಕದಲ್ಲಿ ಭಾರತ, ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿ ಇಂದು, 'ಈಶಾನ್ಯ ಭಾರತದ ಅಭಿವೃದ್ಧಿಯೆಡೆಗಿನ ಒಂದು ಪಯಣ' ಎಂಬುದರ ಕುರಿತ ವರದಿ ಇಲ್ಲಿದೆ.

ವರದಿ : ಅಭಯ್ (೧ ನಿಮಿಷ ೨೦ ಸೆಕೆಂಡ್‌ಗಳು)

ಕಳೆದ ದಶಕದಲ್ಲಿ ಈಶಾನ್ಯ ಭಾರತ ಪ್ರತ್ಯೇಕತೆಯಿಂದ ಏಕೀಕರಣದತ್ತ ಗಮನಾರ್ಹ ಬದಲಾವಣೆ ಕಂಡಿದೆ. "ಆಕ್ಟ್ ಈಸ್ಟ್ ನೀತಿಯಡಿಯಲ್ಲಿ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಈ ಪ್ರದೇಶವನ್ನು ನಿರ್ಲಕ್ಷ್ಯದಿಂದ ಆದ್ಯತೆಯ ಪರದೇಶವಾಗಿ ಪರಿಗಣಿಸಲಾಗಿದೆ. ಶಾಂತಿ ಒಪ್ಪಂದಗಳ ಸಹಿ ಈ ಪ್ರದೇಶದಲ್ಲಿ ಶಾಂತಿಗೆ ಕಾರಣವಾಗಿದ್ದು, ಹಿಂಸಾಚಾರದ ಪ್ರಮಾಣವನ್ನು ಕುಗ್ಗಿಸಿವೆ. ಇದರ ಪರಿಣಾಮವಾಗಿ ೧೯೫೮ ರ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ - ಎಎಫ್ಎಸ್‌ಪಿಎ ವ್ಯಾಪ್ತಿಯನ್ನು ಇಳಿಸುವ ದಿಕ್ಕಿನಲ್ಲಿ ಪ್ರಗತಿ ಸಾಧಿಸಲಾಗಿದೆ. ಇತ್ತೀಚೆಗೆ ಅಸ್ಸಾಂ ಮತ್ತು ಅರುಣಾಚಲ ಪ್ರದೇಶ ದಶಕಗಳಷ್ಟು ಹಳೆಯ ಗಡಿಭಾಗ ವಿವಾದವನ್ನು ಪರಿಹರಿಸಲು ಒಪ್ಪಂದಕ್ಕೆ ಸಹಿ ಹಾಕಿವೆ. ಸಂಪರ್ಕ ವ್ಯವಸ್ಥೆ ಸುಧಾರಣೆಯಾಗಿದ್ದು, ೧೦ ಹೊಸ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಗಳು, ಮಿಜೋರಂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಹೊಸ ರೈಲು ಸಂಪರ್ಕಗಳು, ಬ್ರಹ್ಮಪುತ್ರಾ ನದಿಯಲ್ಲಿ ರೊ-ರೊ ಫೆರ್ರಿ ಸೇವೆಗಳು ಸಂಚಾರ ಸೇವೆಗಳನ್ನು ಪರಿವರ್ತಿಸಿದೆ. ಬೋಗಿಬಿಲ್ ಸೇತುವೆಯಂತಹ ಯೋಜನೆಗಳು ದೂರದ ಪ್ರದೇಶಗಳನ್ನು ಸಂಪರ್ಕಿಸುತ್ತಿವೆ.ಪಿಎಂ-ಡಿವೈನ್ ಮತ್ತು ಉನ್ನತಿ-೨೦೨೪ ನಂತಹ ಯೋಜನೆಗಳು ಈ ಪ್ರದೇಶದ ಆರ್ಥಿಕ ಸಾಮರ್ಥ್ಯಗಳನ್ನು ಅನಾವರಣಗೊಳಿಸುತ್ತಿವೆ. ೧.೩೫ ಲಕ್ಷ ಕೋಟಿ ರೂಪಾಯಿ ಮೌಲ್ಯದ ನೆರವಿನಿಂದ ಸಾಗಿರುವ ಯೋಜನೆಗಳು ಮೂಲಸೌಕರ್ಯ ಮತ್ತು ಜೀವಿಕೋಪಾಯಗಳ ಅಭಿವೃದ್ಧಿಗೆ ಪೋಷಕವಾಗಿವೆ. ಜಲವಿದ್ಯುತ್ ಶಕ್ತಿಯ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ೧೫ ಸಾವಿರ ಮೆಗಾವಾಟ್ ಶುದ್ಧ ಶಕ್ತಿಯನ್ನು ಉಪಯೋಗಿಸುವ ಗುರಿಯತ್ತ ಪ್ರದೇಶ ಸಾಗುತ್ತಿದೆ. ಇಂದು, ವಾಯುವ್ಯ ಭಾರತ ಕೇವಲ ಗಡಿಭಾಗವಲ್ಲ ಬದಲಿಗೆ ಅದು ಭಾರತದ ಅಭಿವೃದ್ಧಿಯ ಪಯಣದ ಚಾಲಕ ಶಕ್ತಿಯಾಗಿದೆ.

*******************

ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿದ್ದ ಮತ್ತು ಬುಡಕಟ್ಟು ಸಮುದಾಯಗಳ ಹಕ್ಕುಗಳು ಮತ್ತು ಘನತೆಗಾಗಿ ಹೋರಾಡಿದ್ದ ಭಗವಾನ್ ಬಿರ್ಸಾ ಮುಂಡಾ, ಅವರ ೧೨೫ ನೇ ಪುಣ್ಯತಿಥಿಯನ್ನು ಇಂದು ಆಚರಿಸಲಾಗುತ್ತಿದೆ. ಬಿರ್ಸಾ ಮುಂಡಾ ೧೮೭೫ ರ ನವೆಂಬರ್ ೧೫ ರಂದು ಜಾರ್ಖಂಡ್‌ನ ಉಲಿಹಾಟುವಿನಲ್ಲಿ ಜನಿಸಿದರು. ಅವರ ಆರಂಭಿಕ ಶಿಕ್ಷಣ ಜರ್ಮನ್ ಮಿಷನ್

ಶಾಲೆಯಲ್ಲಿ ನಡೆಯಿತು ಆದರೆ ಬ್ರಿಟಿಷರು ಶಿಕ್ಷಣದ ಮೂಲಕ ಬುಡಕಟ್ಟು ಜನರನ್ನು ಬೇರೆ ಧರ್ಮಕ್ಕೆ ಪರಿವರ್ತಿಸುವ ಗುರಿಯನ್ನು ಹೊಂದಿದ್ದಾರೆಂದು ಅರಿತುಕೊಂಡ ನಂತರ ಅವರು ಬಿರ್ಸೈತ್ ಅನ್ನು ಸ್ಥಾಪಿಸಿ ,ಬುಡಕಟ್ಟು ಸಮುದಾಯಗಳು ತಮ್ಮ ಸಾಂಪ್ರದಾಯಿಕ ನಂಬಿಕೆಗಳ ಮೇಲೆ ಬ್ರಿಟಿಷ್ ಪ್ರಭಾವವನ್ನು ವಿರೋಧಿಸಲು ಪ್ರಾರಂಭಿಸಿದರು.

******************

ಮ್ಯೂನಿಚ್ ಫುಟ್ಬಾಲ್ ಅರೇನಾದಲ್ಲಿ ನಡೆದ ಯುಇಎಫ್ಎ ನೇಷನ್ಸ್ ಲೀಗ್ ಫುಟ್ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಪೋರ್ಚುಗಲ್ ತಂಡ ಜಯ ದಾಖಲಿಸಿ ಈ ಪ್ರತಿಷ್ಠಿತ ಟೂರ್ನಿಯನ್ನು ಎರಡೂ ಬಾರಿ ಗೆದ್ದ ಮೊದಲನೇ ತಂಡ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಫೈನಲ್ ಪಂದ್ಯದಲ್ಲಿ ನಿಗದಿತ ಸಮಯದಲ್ಲಿ ತಲಾ ೨ ಗೋಲು ಗಳಿಸಿ ಡ್ರಾ ಸಾಧಿಸಿದ ಬಳಿಕ ನಡೆದ ಪೆನಾಲ್ಟಿ ಶೂಟೌಟ್‌ನಲ್ಲಿ ಪೋರ್ಚಗಲ್ ತಂಡ ೫.-೩ ಗೋಲುಗಳ ಅಂತರಲದಲ್ಲಿ ಸ್ಪೇನ್ ತಂಡವನ್ನು ಮಣಿಸಿತು.

******************